9

# ನಾಲಿಗೆಗೆ ಕಡಿವಾಣವನ್ನು ಹಾಕುವದು (3:1-12)

ಸಂಭಾಷಣೆಯ ತಜ್ಞರುಗಳು ಆಶ್ಚರ್ಯಕರವಾದ ಸಂಗತಿಯನ್ನು ತಿಳಿಸುತ್ತಾ ಸಾಮಾನ್ಯವಾದ ಮನುಷ್ಯನು ಇಪ್ಪತ್ತೈದು ಪುಟಗಳು ತುಂಬವಷ್ಟು ಮಾತುಗಳನ್ನು ಪ್ರತಿದಿನ ಆಡುತ್ತಾನೆಂಬುದಾಗಿ ಅಂದಾಜಿಸಿದ್ದಾರೆ. ಅದು ಒಂದು ತಿಂಗಳ ಅವಧಿಯಲ್ಲಿ ಮುನ್ನೂರು ಪುಟಗಳ ಎರಡು ಪುಸ್ತಕಗಳನ್ನು ತುಂಬುತ್ತದೆ. ವರ್ಷಕ್ಕೆ 24 ಪುಸ್ತಕಗಳಾಗುತ್ತವೆ, ಮತ್ತು ಐವತ್ತು ವರ್ಷಗಳ ಮಾತುಗಳು 1,200 ಸಂಪುಟಗಳಾಗತ್ತವೆ. ಸಹಜವಾಗಿ ನಮ್ಮ ಮಾತುಗಳು ಜೀವನದ ಬಹಳಷ್ಟು ಸಮಯವನ್ನು ತನ್ನದಾಗಿಸಿಕೊಳ್ಳುತ್ತದೆ. ಮಾತನಾಡುವದನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ, ಅನೇಕ ಶಾಲೆಗಳು ಸಹಾಯವನ್ನು ನೀಡುತ್ತವೆ.

ನಮ್ಮ ಜೀವಿತದ ಬಹಳಷ್ಟು ಅವಧಿಯನ್ನು ಬಾಯಿ ಮಾತುಗಳು ಆಕ್ರಮಿಸಿ ಕೊಂಡಿರುವದರಿಂದ ದಿನ ನಿತ್ಯದ ಸಂಭಾಷಣೆಯಲ್ಲಿ ನಂಬಿಕೆಯು, ಕಾರ್ಯನಿರ್ವಹಿಸ ಬೇಕು ಎಂದು ಯಾಕೋಬನು ತಿಳಿಸುತ್ತಾನೆ. ಇದರಲ್ಲಿ ಸಂಭಾಷಣೆಯ ಕುರಿತಾಗಿ ಇರುವದರಿಂದ, ಕೆಲವರು ಈ ಪತ್ರಿಕೆಯನ್ನು "ಕ್ರೈಸ್ತ ಸಂಭಾಷಣೆಯನ್ನು ಅಭಿವೃದ್ಧಿಪಡಿಸುವ" ಪಠ್ಯಪುಸ್ತಕ ಎಂದು ತಿಳಿಸಿದ್ದಾರೆ. ಪ್ರತಿ ವಚನದ ಶೇಖಡ 20 ಭಾಗವು ಸಂಭಾಷಣೆಯ ಕುರಿತಾಗಿರುತ್ತದೆ.

ನಮ್ಮ ಪಾಠದ ವಾಕ್ಯಭಾಗವು ಯಾಕೋಬ 3:1-12, ಹೊಸ ಒಡಂಬಡಿಕೆಯಲ್ಲಿನ ಸಂಭಾಷಣೆಯ ಕುರಿತಾಗಿದೆ. ಈ ವಾಕ್ಯ ಭಾಗದಲ್ಲಿ, ಯಾಕೋಬನು ಪ್ರಾಮುಖ್ಯ ವಾದ ನರದ ಬಗ್ಗೆ ಸಮಸ್ಯೆಯ ಅಂತರಾಳವನ್ನು ನಾಲಿಗೆಯ ಕುರಿತಾಗಿಯೂ ಮಾತನಾಡುತ್ತಿದ್ದಾನೆ. ಈ ಸಂದೇಶವು ಮತ್ತು ವಾಕ್ಯಭಾಗವು ಕೇವಲ ಪ್ರಾಚೀನ ವಾದದ್ದು ಎಂದು 20ನೇ ಶತಮಾನದ ಕ್ರೈಸ್ತರು ತಿಳಿಯಬಾರದು. ಒಂದಲ್ಲಾ - ಒಂದು ಸಮಯದಲ್ಲಿ ನಾವುಗಳು ನಾಲಿಗೆಯ ವಿಷಯದಲ್ಲಿ ತೊಂದರೆಗೊಳಗಾಗುತ್ತೇವೆ.

## ನಾಲಿಗೆಯ ಪ್ರಾಮುಖ್ಯತೆ (3:1, 2)

ಅವನು ತಿಳಿಸಿದ ಮೊದಲನೆಯ ಪದಗಳೇ ಪ್ರಸಂಗಿಗಳಿಗೂ ಮತ್ತು ಬೋಧಕರಿಗೂ ವಿಶೇಷ ಪ್ರತಿಬಿಂಬವನ್ನು ತೋರಿಸುತ್ತದೆ: "ಬಹುಮಂದಿ ಬೋಧಕರಾಗ ಬೇಡಿರಿ, ನನ್ನ ಸಹೋದರರೇ, ..." (3:1ಎ). ಇದು ಯಾಕೋಬನು ಮಾಡಿರುವ ಎಚ್ಚರಿಕೆಯ ವಾಕ್ಯವಾ ಗಿರುತ್ತದೆ. ಇತರ ವಾಕ್ಯಗಳ (ಇಬ್ರಿಯ 5:12; ಎಫೆಸ 4:11) ಅನುಗುಣವಾಗಿ ಯಾಕೋಬನು ಬೋಧಕರುಗಳನ್ನು ಅಧೈರ್ಯಗೊಳಿಸುತಿಲ್ಲ. ಅವನ ಹೇಳಿಕೆ ಏನೆಂದರೆ ಜವಾ ಬ್ದಾರಿಯು ಹೊಣೆಗಾರಿಕೆಯನ್ನು ತರುತ್ತದೆ. ಆದುದರಿಂದ ಬೋಧಕರುಗಳು ನ್ಯಾಯವಾದ ತೀರ್ಪನ್ನು ಹೊಂದುವರು ಸಹಜವಾಗಿ, ಬೋಧಿಸುವಂತಹದ್ದು ಅಪಾಯಕರವಾದ ವೃತ್ತಿಯಾಗಿರುತ್ತದೆ. ಕ್ರೈಸ್ತ ಬೋಧಕನು ಅಮೂಲ್ಯವಾದ ಸ್ವಸ್ಥ್ಯವನ್ನು ಹೊಂದಿರುತ್ತಾನೆ ಅವನು ಯೆಹೂದ್ಯ ರಬ್ಬಿಯ ಹೆಜ್ಜೆ ಜಾಡನ್ನು ಹಿಂಬಾಲಿಸುತ್ತಾನೆ. ಉತ್ತಮವಾದ ರಬ್ಬಿಗಳು ಜನರಿಗೆ ಬೋಧಿ ಸುವಂತ ಉತ್ತಮ ಕಾರ್ಯಗಳನ್ನು ಮಾಡಿದ್ದಾರೆ. ಆ ರಬ್ಬಿಗಳಿಗೆ ಸಿಗುತ್ತಿದ್ದಂತ ವಿಶೇಷ ವಾದ ಮತ್ತು ಹೆಚ್ಚಾದ ಗೌರವದ ನಿಮಿತ್ತ ಅವು ತಮ್ಮ ಸ್ವಾರ್ಥವನ್ನು ಹೆಚ್ಚಿಕೊಂಡವ ರಾಗಿ ತಮ್ಮನ್ನೆ ಹಾಳು ಮಾಡಿಕೊಂಡರು. ಯೌವನಸ್ಥರಾದ ಯೆಹೂದ್ಯರು ಅವರು ತಾಯಿ ತಂದೆಗಳಿಗಿಂತಲೂ ಹೆಚ್ಚಾಗಿ ರಬ್ಬಿಗಳನ್ನು ಗೌರವಿಸುತ್ತಿದ್ದರು. ಉದಾಹರಣೆಗೆ ವೈರಿಯು

ಇವರ ಸ್ಥಳವನ್ನು ವಶಪಡಿಸಿಕೊಂಡಾಗ ಅವರ ತಂದೆ ತಾಯಿಗಳನ್ನು ಮತ್ತು ರಬ್ಬಿಯನ್ನು ವಶಪಡಿಸಿಕೊಳ್ಳು ವಾಗ, ಮೊದಲು ರಬ್ಬಿಯನ್ನೆ ಬಿಡಿಸಿಕೊಳ್ಳಬೇಕಾಗಿತ್ತು. ಜನರಿಂದ ಈ ರೀತಿಯಾದಂತ ಗೌರವಕ್ಕೆ ಪಾತ್ರರಾದ ಈ ರಬ್ಬಿಗಳ ಕುರಿತಾಗಿ (ಮತ್ತಾಯ 23:2-7)ರಲ್ಲಿ ಯೇಸು ಕ್ರಿಸ್ತನು ವಿವರಿಸುವದನ್ನು ಅರ್ಥಮಾಡಿಕೊಳ್ಳುವದು ಅಸಾಧ್ಯವಲ್ಲ. ಈ ದಿವಸಗಳ ಬೋಧಕರುಗಳು ಸಹ, ಅದೇ ಅಪಾಯಕ್ಕೆ ಸಿಲುಕಿದ್ದಾರೆ, ಮುಖ್ಯವಾಗಿ ಪ್ರಸಂಗಿಗಳು ತಪ್ಪಾದಂತ ಕಾರಣಗಳಿಂದ - ಸ್ವಗೌರವಕ್ಕಾಗಿ, ಸ್ಥಾನಮಾನಕ್ಕಾಗಿ ಸ್ನೇಹಿತರಿಂದಲೂ ಮತ್ತು ಕುಟುಂಬದಿಂದಲೂ ಮೆಚ್ಚಿಗೆಗಳಿಸುವದಕ್ಕಾಗಿ ಅನೇಕ ಯೌವನಸ್ಥರು ಪ್ರಸಂಗಿಗ ಳಾಗುತ್ತಾರೆ. ಆ ಕೆಲಸದಲ್ಲಿ ಉಂಟಾಗುವಂತ ನೋವು ಪ್ರಯಾಸಗಳನ್ನು ಎದುರಿಸಲಾರದೆ, ತಮ್ಮ ಕೆಲಸವನ್ನು ಬಿಟ್ಟು ಹೋಗುತ್ತಾರೆ. ಈ ಕಾರಣದಿಂದ ಈ ಕಾರ್ಯದಲ್ಲಿ ಮುಂದುವರೆ ಯುವವರು ರಬ್ಬಿಗಳ ಹಾಗೆ ಆತ್ಮೀಕವಾದ ಕೋಪವುಳ್ಳವರಾಗಿರುತ್ತಾರೆ.

ಬೋಧಕರುಗಳು ಮತ್ತು ಪ್ರಸಂಗಿಗಳು ಮಾತ್ರ ನಾಲಿಗೆಗಳಿಂದ ಪಾಪ ಮಾಡುವ ಶೋಧ ನೆಗೆ ಒಳಗಾಗುವದಿಲ್ಲ. ನಾಲಿಗೆಯನ್ನು ಹತೋಟಿಗೆ ತರುವಂತದ್ದು ಬಹಳ ಕಷ್ಟಕರವಾದದ್ದು, ಆದುದರಿಂದ ಪ್ರತಿಯೊಬ್ಬ ಕ್ರೈಸ್ತನು ನಾಲಿಗೆಯ ಕುರಿತಾಗಿ ಎಚ್ಚರವುಳ್ಳವನಾಗಿರಬೇಕು. ಯಾಕೋಬನು ಈ ರೀತಿಯಾಗಿ ಹೇಳುವಾಗ, "... ಒಬ್ಬನು ಮಾತಿನಲ್ಲಿ ತಪ್ಪದಿದ್ದರೆ ಅವನು ಶಿಕ್ಷಿತನು ತನ್ನ ದೇಹವನ್ನೆಲ್ಲಾ ಸ್ವಾಧೀನ ಪಡಿಸಿಕೊಳ್ಳುವದಕ್ಕೆ ಸಮರ್ಥನೂ ಆಗಿದ್ದಾನೆ" (3:2), ಇಲ್ಲಿ ಹತೋಟಿಗೆ ಬರಲಾರದ ವಿಷಯಗಳ ಬಗ್ಗೆ ಪಟ್ಟಿ ಮಾಡಿದ್ದಾನೆ, ನಾಲಿಗೆಯನ್ನು ಹತೋಟಿಗೆ ತರುವಂತದ್ದು ಬಹು ಕಷ್ಟಕರವಾದದ್ದು. ನೀನು ನಾಲಿಗೆಯನ್ನು ಹತೋಟಿಗೆ ತರುವದಾದರೆ, ಮಿಕ್ಕಾದ ಎಲ್ಲವನ್ನು ಹತೋಟಿಗೆ ತರಬಹುದು.

## ನಾಲಿಗೆಯನ್ನು ಹತೋಟಿಗೆ ತರುವದು (3:3, 4)

ಈ ಕಾರ್ಯವು ಕಷ್ಟಕರವಾಗಿರುವದರಿಂದ ಪ್ರತಿಯೊಬ್ಬ ಕ್ರೈಸ್ತನು ತನ್ನ ನಾಲಿಗೆಯನ್ನು ಹತೋಟಿಯಲ್ಲಿಡಲು ಶತಪ್ರಯತ್ನವನ್ನು ಮಾಡಬೇಕು. ಯಾಕೋಬನು ಉಪಯೋಗಿಸಿದ ದೃಷ್ಟಾಂತವನ್ನು ಗಮನಿಸಿರಿ. ನಾವು ಕುದುರೆಗಳನ್ನು ಸ್ವಾದೀನ ಮಾಡಿಕೊಳ್ಳಬೇಕೆಂದಿರು ವಾಗ ಅವುಗಳ ಬಾಯಿಗೆ ಕಡಿವಾಣ ಹಾಕುತ್ತೇವಲ್ಲಾ; ಹಡಗುಗಳನ್ನು ನೋಡಿರಿ, ಅವು ಬಹು ದೊಡ್ಡವು, ಬಲವಾದ ಗಾಳಿಯಿಂದ ಬಡಿಸಿಕೊಂಡು ಹೋಗುತ್ತವೆ ಆದರೂ ನಡಿಸುವವನು ಬಹು ಸಣ್ಣ ಚುಕ್ಕಾಣಿಯಿಂದ ಅವುಗಳನ್ನು ತನ್ನ ಮನಸ್ಸಿಗೆ ಬಂದ ಕಡೆಗೆ ತಿರುಗಿಸುತ್ತಾನೆ. ಅದೇ ರೀತಿಯಲ್ಲಿ ನಾಲಿಗೆಯು ದೇಹವನ್ನು ಸ್ವಾಧೀನಪಡಿಸುತ್ತದೆ. ವಚನ 5ರಲ್ಲಿ ಅವನು ಹೇಳುವುದು, "ಹಾಗೆಯೇ ನಾಲಿಗೆಯು ಕೂಡ ಚಿಕ್ಕ ಅಂಗವಾಗಿದ್ದರೂ, ದೊಡ್ಡ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ ... ." ಅದಕ್ಕೆ ವ್ಯತಿರಿಕ್ತವಾದ ಬಲವನ್ನು ಜಯಿಸಬೇಕು, ಕಡಿವಾಣವು ಕುದುರೆಯ ಕ್ರೂರ ಸ್ವಭಾವವನ್ನು ಜಯಿಸಬೇಕು, ಹಡಗಿನ ಚುಕ್ಕಾಣಿಯು, ನೀರಿನ ರಭಸವನ್ನು ಮತ್ತು ಗಾಳಿಯ ಒತ್ತಡವನ್ನು ಸಹಿಸಿಕೊಳ್ಳಬೇಕು.

ಅದೇ ರೀತಿಯಲ್ಲಿ ಮಾನವನ ನಾಲಿಗೆಯನ್ನು ಸ್ವಾಧೀನ ಪಡಿಸಿ, ದೇಹಕ್ಕೆ ಮಾರ್ಗದರ್ಶನವನ್ನು ನೀಡಬೇಕು, ಅದು ವ್ಯತಿರಿಕ್ತವಾದ ಶಕ್ತಿಗಳನ್ನು ಜಯಿಸಬೇಕು. ಅಂತರಾಳದ ಸ್ವಭಾವವು ಮತ್ತು ಬಾಹಿರ ಪ್ರಪಂಚದ ಪಾಪವು ಜೀವನದ ಪ್ರತಿ ಹೆಜ್ಜೆಯಲ್ಲೂ ಹೋರಾಡುತ್ತದೆ. ನಡಿಸುವವನು, ಚುಕ್ಕಾಣಿಯಿಂದ ಹಡಗನ್ನು ನಿಯಂತ್ರಿಸುವಂತೆ ಮತ್ತು, ಕಡಿವಾಣದ ಮೂಲಕ ಕುದುರೆಯನ್ನು ಸ್ವಾದೀನ ಮಾಡುವಂತೆ ಯೇಸುವಿನ ಮುಖಾಂತರ ನಮ್ಮ ನಾಲಿಗೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ನಮ್ಮ ಜೀವಿತದ ಒಡೆಯನನ್ನು ನಮ್ಮ ನಾಲಿಗೆಯ ಒಡೆಯನನ್ನಾಗಿ ಮಾಡಿಕೊಳ್ಳಬೇಕು. ಕೀರ್ತನೆಗಾರನ ಪ್ರಾರ್ಥನೆಯನ್ನು ನಾವು ಪ್ರತಿಧ್ವನಿಸಬೇಕು: "ಯೆಹೋವನೇ ನನ್ನ ಬಾಯಿಗೆ ಕಾವಲಿರಿಸು; ನನ್ನ ತುಟಿಗಳೆಂಬ ಕದವನ್ನು ಕಾಯಿ" (ಕೀರ್ತನೆ 141:3).

## ನಾಲಿಗೆಯಿಂದಾಗುವ ಅಪಾಯಗಳು (3:5-12)

ಸ್ವಾಧೀನಕ್ಕೆ ಒಳಗಾಗದ ನಾಲಿಗೆಯಿಂದ ಉಂಟಾಗಬಹುದಾದ ಅಪಾಯಗಳನ್ನು ಯಾಕೋಬನು ತಿಳಿದವನಾಗಿ, ಅದನ್ನು ಸ್ವಾಧೀನಪಡಿಸಬೇಕು ಎಂದು ಹೇಳಿದನು. ಸ್ವಾಧೀನಕ್ಕೆ ಒಳಪಡದ ನಾಲಿಗೆಯಿಂದ ಆಗುವ, ಮೂರು ಚಕಿತಗೊಳಿಸುವ ಮಾಹಿತಿಯನ್ನು ತಿಳಿಸುತ್ತಾನೆ.

ಮೊದಲನೆಯದಾಗಿ ಅದು, ದೇಹವನ್ನು ನಾಶಮಾಡುತ್ತದೆ,

> ಹಾಗೆಯೇ ನಾಲಿಗೆಯು ಕೂಡ ಚಿಕ್ಕ ಅಂಗವಾಗಿದ್ದರೂ ದೊಡ್ಡ ಕಾರ್ಯಗಳನ್ನು ಕೊಚ್ಚಿಕೊಳ್ಳುತ್ತದೆ. ಎಷ್ಟು ಕೊಂಚ ಕಿಚ್ಚು ಎಷ್ಟು ದೊಡ್ಡಕಾಡನ್ನು ಉರಿಸುತ್ತದೆ ನೋಡಿರಿ. ನಾಲಿಗೆಯೂ ಕಿಚ್ಚೇ. ನಾಲಿಗೆಯು ಅಧರ್ಮಲೋಕ ರೂಪವಾಗಿ ನಮ್ಮ ಅಂಗಗಳ ನಡುವೆ ಇಟ್ಟದೆ. ಅದು ದೇಹವನ್ನೆಲ್ಲಾ ಕೆಡಿಸುತ್ತದೆ. ತಾನೇ ನರಕದಿಂದ ಬೆಂಕಿಹತ್ತಿಸಿಕೊಳ್ಳುತ್ತಾ ಪ್ರಪಂಚವೆಂಬ ಚಕ್ರಕ್ಕೆ ಬೆಂಕಿ ಹಚ್ಚುತ್ತದೆ (3:5, 6).

ಕೊಂಚ ಕಿಚ್ಚು, ದೊಡ್ಡ ಕಾಡನ್ನು ಉರಿಯ ಮಾಡುವಂತೆ, ನಾಲಿಗೆಯು ಅಪಾಯವನ್ನು ತರುತ್ತದೆ. ಕಾಡಿನ ಬೆಂಕಿಯು ಹತೋಟಿಯನ್ನು ತಪ್ಪಿ, ಬೆಂಕಿ ಪ್ರಾರಂಭವಾದ ಸ್ಥಳದಿಂದ ಬಹುದೂರದವರೆಗೆ ಬೆಲೆಯುಳ್ಳ ಆಸ್ತಿಯನ್ನು ಕ್ರಮವಾಗಿ ನಾಶಮಾಡುತ್ತದೆ. ನಾಲಿಗೆಯ ಬಗ್ಗೆ ಇದು ಸತ್ಯವಾಗಿರುತ್ತದೆ. ನಾಲಿಗೆಯಿಂದ ಉದ್ಭವವಾಗುವ ಸಣ್ಣ ಬೆಂಕಿಯು, ತನ್ನಿಂದ ಬಹುದೂರದವರೆಗೂ ಹಬ್ಬಿ ಅನೇಕರ ಜೀವಿತವನ್ನು ನಾಶ ಪಡಿಸುತ್ತದೆ. ಯಾಕೋಬನ ಮಾತಿನಲ್ಲಿ ಯಾವ ಆಶ್ಚರ್ಯವಿಲ್ಲ "ನರಕವೆಂಬ ಬೆಂಕಿ" ಈ ವಿಧವಾಗಿ ಜನರು ನಾಶನಕ್ಕೆ ಒಳಪಡುವಾಗ ಸೈತಾನನು ಸಂತೋಷಿಸುತ್ತಾನೆ.

ಎರಡನೆಯದಾಗಿ, ನಾಲಿಗೆಯನ್ನು ನಿಯಂತ್ರಣಗೊಳಿಸಲಾಗದು. "ನರಜಾತಿಯು ಸಕಲ ಜಾತಿಯ ಮೃಗ ಪಕ್ಷಿ ಕ್ರಿಮಿ ಜಲಚರಗಳನ್ನು ಹತೋಟಿಗೆ ತರುವದುಂಟು ಮತ್ತು ತಂದದ್ದುಂಟು ಆದರೆ ನಾಲಿಗೆಯನ್ನು ಯಾವ ಮಾನವನೂ ಹತೋಟಿಗೆ ತರಲಾರನು ಅದು ಸುಮ್ಮನಿರಲಾರದ ಕೆಡುಕಾಗಿದೆ; ಮರಣಕರವಾದ ವಿಷದಿಂದ ತುಂಬಿದೆ" (3:7, 8). ಪರಿಶುದ್ಧಾತ್ಮನಿಂದ ಪ್ರೇರಿತನಾಗಿ ಯಾಕೋಬನು ಇದನ್ನು ತಿಳಿಸಿದ್ದಾನೆ. ಸಹಜವಾಗಿ, ಮಾನವರು ತಮ್ಮ ನಾಲಿಗೆಯನ್ನು ಸ್ವಾದೀನದಲ್ಲಿಡಲು ಸಾಧ್ಯವಿಲ್ಲ. ಕ್ರೂರತನವನ್ನು ಕೆಟ್ಟ ಅವಿಶ್ರಾಂತಿಯನ್ನು ಅಥವಾ ಕೆಲವು ಸಂಗತಿಗಳನ್ನು ಮಾತ್ರ ಕೆಲವರು ಹತೋಟಿಯಲ್ಲಿಡಬೇಕಾಗುತ್ತದೆ. ದೊಡ್ಡ ಹಡಗನ್ನು ಚುಕ್ಕಾಣಿಯಿಂದ ಹತೋಟಿಗೆ ತರಲು, ನಡಿಸುವವನು ಚುಕ್ಕಾಣಿಯನ್ನು ಹತೋಟಿಯಲ್ಲಿಡಬೇಕು. ಪುನಃ ನಮ್ಮ ಜೀವಿತದ ಕರ್ತನನ್ನು ನಮ್ಮ ನಾಲಿಗೆಗೆ ಒಡೆಯನನ್ನಾಗಿ ಮಾಡಿಕೊಳ್ಳಬೇಕು. ಹರಡುತ್ತಿರುವ ಬೆಂಕಿಯನ್ನು ಮತ್ತು ಶಕ್ತಿಯ ಮೂಲವನ್ನು ಆತನೊಬ್ಬನು ಮಾತ್ರ ಸ್ವಾಧೀನಲ್ಲಿಡುತ್ತಾನೆ.

ಮೂರನೆಯದಾಗಿ, ತರಬೇತಿಗೊಳ್ಳದ ನಾಲಿಗೆಯು, ಕ್ರೈಸ್ತರಲ್ಲಿ ಸಾಮರಸ್ಯವಿಲ್ಲದ ನಂಬಿಕೆಯನ್ನು ಉಂಟುಮಾಡುತ್ತದೆ. ಅದನ್ನು ಪುಷ್ಟಿಕರಿಸಲು: "ಊಟೆಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರಡುವದುಂಟೇ?" (3:11). "ಇಲ್ಲ" ಎಂಬುದೆ ಈ ಪ್ರಶ್ನೆಗೆ ಉತ್ತರವಾಗಿರುತ್ತದೆ, "ಹೌದು" ಎಂಬುದಾಗಿ ಹೇಳುವುದಾದರೆ ನಮಗೆ ತಿಳಿದಿರುವದೆಲ್ಲವೂ ವ್ಯತಿರಿಕ್ತವಾಗಿರಬೇಕು. ಅವನ ಮುಂದಿನ ದೃಷ್ಟಾಂತ; "ಅಂಜೂರದ ಮರವು ಎಣ್ಣೇ ಮರದ ಕಾಯಿ ಬಿಡುವದೋ? ದ್ರಾಕ್ಷೇ ಬಳ್ಳಿಯಲ್ಲಿ ಅಂಜೂರ ಹಣ್ಣಾಗುವುದೋ? ಹಾಗೆಯೇ ಉಪ್ಪು ನೀರಿನ ಬಾವಿಯಿಂದ ಸಿಹಿ ನೀರು ಬರುವದಿಲ್ಲ? ..." (3:12). ಇಲ್ಲಿರುವ ಅಂಶವೇನೆಂದರೆ, ಕ್ರೈಸ್ತನು ಭಾನುವಾರ ಆರಾಧನೆಯಲ್ಲಿ ತನ್ನ ನಾಲಿಗೆಯನ್ನು ಉಪಯೋಗಿಸಿ, ವಾರವಿಡೀ, ತನ್ನ ನೆರಯವನನ್ನು ಶಪಿಸಲು ನಾಲಿಗೆಯನ್ನು ಉಪಯೋಗಿಸಿದರೆ, ಇದಕ್ಕಿಂತಲೂ ವ್ಯತಿರಿಕ್ತವಾ

ದದ್ದು ಬೇರೆ ಯಾವುದೂ ಇರುವದಿಲ್ಲ. ಶಪಿಸುವಂಥ, ಆಣೆಯಿಡುವಂಥ ಅಥವಾ ಚಾಡಿ ಹೇಳುವಂಥ ಕ್ರೈಸ್ತನು ತೊಂದರೆಗೆ ಈಡಾಗುತ್ತಾನೆ (ಜ್ಞಾನೋಕ್ತಿ 4:23; ಮತ್ತಾಯ 15:18). ಅಗಲವಾದ ಬಾಯಿಯನ್ನು ಕೆಟ್ಟ ತಮಾಷೆಯನ್ನು, ಕ್ರೂರಮಾತುಗಳನ್ನು ಮತ್ತು ನವೀನ ಚಾಡಿಗಳನ್ನು ಹೇಳುವವನು ಪ್ರಮುಖವಾದ ಕ್ರೈಸ್ತನಾಗುವದಕ್ಕೆ ಸಾಧ್ಯವಿಲ್ಲ. ಯಾಕೆ? ಪ್ರಪಂಚವು ಸಹ ಅವನಲ್ಲಿರುವ ತರಬೇತಿಗೊಳ್ಳದ ನಾಲಿಗೆಯಲ್ಲಿರುವ ವ್ಯತ್ಯಾಸವನ್ನು ಗಮನಿಸುತ್ತದೆ.

## ಮುಕ್ತಾಯ

ಕೀರ್ತನೆಗಾರನು ಹೇಳಿರುವದು, "... ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು; ದುಷ್ಟರು ನನ್ನ ಮುಂದೆ ಇರುವಾಗ ಬಾಯಿಗೆ ಕುಕ್ಕೆ ಹಾಕಿಕೊಂಡಿರುವೆನು ಅಂದು ಕೊಂಡೆನು, ..." (ಕೀರ್ತನೆ 39:1), ನಂಬಿಕೆಯು ನಮ್ಮ ಜೀವಿತದಲ್ಲಿ, ಯಾವ ವಿಧವಾದ ವ್ಯತ್ಯಾಸವನ್ನು ತೋರಬಹುದು? ಯೇಸುವನ್ನು ನಮ್ಮ ಒಡೆಯನನ್ನಾಗಿ ಮಾಡಿಕೊಳ್ಳುವದರ ಮೂಲಕ! ಹತೋಟಿಗೆ ತರುವಂಥ ಬೇರೆಯಾವ ಸವಾಲು ಇರದೆ, ನಾವು ತಿಳಸಿರುವಂಥದ್ದು ಮಾತ್ರ ವಿಹಿತಾಗಿರುತ್ತದೆ!